RNU AIR DHARWAD

AUGUST 11, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ, ದೂರದರ್ಶಿ ನಾಯಕತ್ವ, ವಿಕಸಿತ ಭಾರತ ಗುರಿ ಸಾಧನೆಗೆ, ಭದ್ರ ಅಡಿಪಾಯವಾಗಿದೆ ಎಂದು, ರೇಲ್ವೆ ಖಾತೆ ಸಚಿವ, ಅಶ್ವಿನಿ ವೈ ಷ್ಣವ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಸಚಿವರು, ಕರ್ನಾಟಕದ ರೇಲ್ವೆ ಯೋಜನೆಗಳಿಗೆ, ಪ್ರಸಕ್ತ ಸಾಲಿನ ಮುಂಗಡಪತ್ರದಲ್ಲಿ, 7 ಸಾವಿರದ 500 ಕೋಟಿ ರೂಪಾಯಿಗಿಂತಲೂ ಹೆಚ್ಚು, ಅನುದಾನ ಒದಗಿಸಲಾಗಿದೆ. ಪ್ರಸ್ತುತ 54 ಸಾವಿರ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ವಿವಿಧ ಕಾಮಗಾರಿಗಳು, ರಾಜ್ಯದಲ್ಲಿ ಪ್ರಗತಿಯಲ್ಲಿವೆ ಎಂದರು. ಅಮೃತ ಭಾರತ ಯೋಜನೆಯಡಿ, ಕರ್ನಾಟಕದ 61 ರೈಲು ನಿಲ್ದಾಣಗಳನ್ನು ಅಧುನೀಕರಣ ಗೊಳಿಸಲಾಗುತ್ತಿದ್ದು, 124 ಮೇಲ್ಸೇತುವೆ ಮತ್ತು ಕೆಳ ಸೇತುವೆ ಕಾಮಗಾರಿ ಪ್ರಗತಿಯಲ್ಲಿದೆ ಎಂದು, ತಿಳಿಸಿದರು.

<><><>

ಬಾಬಾಸಾಹೇಬ ಅಂಬೇಡ್ಕರ್ ಅವರಿಗೆ, ಸ್ವಾತಂತ್ರ್ಯದ ಜೊತೆ, ಶೋಷಿತರಿಗೆ ಸಮಾನತೆ ಒದಗಿಸಬೇಕೆಂಬ, ತುಡಿತವಿತ್ತು ಎಂದು, ಹಿರಿಯ ಕಾಂಗ್ರೆಸ್ ಮುಖಂಡ, ಕೆ.ಆರ್. ರಮೇಶಕುಮಾರ ಹೇಳಿದ್ದಾರೆ. ಯಾದಗಿರಿಯಲ್ಲಿ, ಸಂವಿಧಾನ ಸಂರಕ್ಷಣಾ ಸಮಿತಿ ಆಯೋಜಿಸಿದ್ದ, ಸಂವಿಧಾನ ಜನ ಜಾಗೃತಿ ಸಮಾವೇಶದಲ್ಲಿ, ಅವರು ಮಾತನಾಡಿದರು. ಭಾರತೀಯ ನಾಗರಿಕರಾದ ಪ್ರತಿಯೊಬ್ಬರೂ, ಸಂವಿಧಾನವನ್ನು ಓದಬೇಕು. ಆತ್ಮಗೌರವದಿಂದ ತಲೆ ಎತ್ತಿ, ಸ್ವಾಭಿಮಾನದಿಂದ ಬದುಕಲು, ಪ್ರೇರಣೆ ನೀಡುವ ಗ್ರಂಥವದು ಎಂದರು. ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ, ಶರಣಬಸಪ್ಪ ದರ್ಶನಾಪುರ ಮಾತನಾಡಿ, ಶೋಷಿತರು ಒಗ್ಗೂಡಬೇಕು. ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ, ಜಾಗರೂಕರಾಗಬೇಕು. ಸಮಾನ ಅವಕಾಶಗಳನ್ನು ಪಡೆದು, ಗೌರವದಿಂದ ಬದುಕುವಂತಾಗಬೇಕು ಎಂದು, ಆಶಿಸಿದರು.

<><><>

ಆತ್ಮ ನಿರ್ಭರ ಭಾರತ ಕಿರು ಆಹಾರ ಉದ್ದಿಮೆಗಳ ನಿಯಬದ್ಧಗೊಳಿಸುವಿಕೆ ಯೋಜನೆಯು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ನಡೆಯುತ್ತಿದ್ದು, ಕಿರು ಆಹಾರ ಸಂಸ್ಕರಣಾ ಉದ್ಯಮಗಳಿಗೆ ಹಣಕಾಸು ಹಾಗೂ ತಾಂತ್ರಿಕ ಸಹಕಾರವನ್ನು ನೀಡುತ್ತದೆ ಎಂದು ವಿಜಯಪುರ ಜಿಲ್ಲಾಧಿಕಾರಿ ಡಾಕ್ಟರ ಆನಂದ. ಕೆ ಹೇಳಿದ್ದಾರೆ. ಒಂದು ಜಿಲ್ಲೆ, ಒಂದು ಉತ್ಪನ್ನಗಳಿಗೂ ಉತ್ತೇಜನ ನೀಡುವ ಪಿ.ಎಂ.ಎಫ್.ಎಂ.ಇ ಯೋಜನೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಅವರು, ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಧ್ವನಿ: ಆನಂದ ಕೆ 39 ಸೆಕೆಂದುಗಳು

<><><>

ರಾಜ್ಯ ವಿಧಾನಮಂಡಲದ ಮುಂಗಾರು ಅಧಿವೇಶನ ಇಂದು ಆರಂಭಗೊಂಡಿದೆ. ಈ ತಿಂಗಳ 22 ರ ವರೆಗೆ ನಡೆಯಲಿರುವ ಅಧಿವೇಶನದಲ್ಲಿ 24 ಕ್ಕೂ ಹೆಚ್ಚು ಮಸೂದೆಗಳು ಮಂಡನೆಯಾಗುವ ನಿರೀಕ್ಷೆ ಇದೆ. ವಿಧಾನ ಪರಿಷತ್ತು ಹಾಗೂ ವಿಧಾನಸಭೆಯಲ್ಲಿ ಇಂದು, ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

<><><>

79 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ, ಕೇಂದ್ರ ಸರ್ಕಾರ ಹರ್ ಘರ್ ತಿರಂಗಾ ಅಭಿಯಾನಕ್ಕೆ ಕರೆ ನೀಡಿರುವ ಹಿನ್ನೆಲೆ, ನಾಳೆ ಚಿಕ್ಕಬಳ್ಳಾಪುರದ ಇತಿಹಾಸ ಪ್ರಸಿದ್ಧ ದಕ್ಷಿಣ ಜಲಿಯನ್ ವಾಲಾಬಾಗ್ ಖ್ಯಾತಿಯ, ವಿಧುರಾಶ್ವತ್ಥದಲ್ಲಿ ಹರ್ ಘರ್ ತಿರಂಗಾ ಕಾರ್ಯಕ್ರಮ ಆಯೋಜಿತವಾಗಿದೆ. ಬಿಜೆಪಿ ಜಿಲ್ಲಾ ಘಟಕ ಆಯೋಜಿಸಿರುವ ಕಾರ್ಯಕ್ರಮದಲ್ಲಿ, ಮಧ್ಯಾಹ್ನ 2 ಗಂಟೆಗೆ ಗೌರಿಬಿದನೂರು ನಗರದಿಂದ ವಿಧುರಾಶ್ವತ್ಥದವರೆಗೆ ಬೃಹತ್ ಬೈಕ್ ರ್ಯಾಲಿ ನಡೆಯಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಡಾ.ಕೆ.ಸುಧಾಕರ್ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆ, ಮೈಸೂರಿನ ಜಂಬೂ ಸವಾರಿಗಾಗಿ, ಗಜಪಡೆಯನ್ನು, ಸಂಪ್ರದಾಯಿಕ ಪೂಜೆಯೊಂದಿಗೆ, ಅಂಬಾ ವಿಲಾಸ ಅರಮನೆಯ, ಜಯ ಮಾರ್ತಾಂಡ ದ್ವಾರದ ಬಳಿ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಸಿ. ಮಹದೇವಪ್ಪ ಸ್ವಾಗತಿಸಿದರು. ಇಂದಿನಿಂದ ದಸರಾ ಆನೆಗಳ ತಾಲೀಮು ಆರಂಭವಾಗಲಿದ್ದು, ಒಟ್ಟು 9 ಆನೆಗಳ ತೂಕ ಪರೀಕ್ಷೆ ನಡೆಸಲಾಯಿತು.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ನಂದಿ ಬೆಟ್ಟದಲ್ಲಿ, ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಆಯೋಜಿಸಿದ್ದ, ಮುಂಗಾರು ಓಟದ ಸ್ಪರ್ಧೆಗೆ, ಜಿಲ್ಲಾ ಉಸ್ತುವಾರಿ ಸಚಿವ ಕೆ. ಸುಧಾಕರ ಚಾಲನೆ ನೀಡಿದರು. ನಿಸರ್ಗ ರಮಣೀಯ ನಂದಿ ಬೆಟ್ಟದಲ್ಲಿ, ಅರಣ್ಯ ಇಲಾಖೆಯೊಂದಿಗೆ ಸಮಾಲೋಚಿಸಿ, ಚಾರಣಿಗರ ಅನುಕೂಲಕ್ಕಾಗಿ, ರೋಪ್ ವೇ ನಿರ್ಮಸಲು, ಕ್ರಮ ಕೈಗೊಳ್ಳುವುದಾಗಿ, ಸಚಿವರು ತಿಳಿಸಿದರು.

<><><>

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ-ಕೆ.ಎಸ್.ಸಿ.ಎ ಆಯೋಜಿಸಿರುವ ಪ್ರತಿಷ್ಠಿತ ಮಹಾರಾಜ ಟ್ರೋಫಿ-2025, ಟಿ-20 ಕ್ರಿಕೆಟ್ ಪಂದ್ಯಾವಳಿಯು ಇಂದಿನಿಂದ ಮೈಸೂರಿನಲ್ಲಿ ಆರಂಭಗೊಳ್ಳಲಿದೆ. ಇಂದು ಮಧ್ಯಾಹ್ನ 3.15 ಕ್ಕೆ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಮಂಗಳೂರು ಡ್ರಾಗನ್ಸ್ ತಂಡವನ್ನು ಎದುರಿಸಲಿದೆ.

<><><>

ಲಾವೋಸ್ ನ ವಯೆಂಟಿಯಾನ್ ನಲ್ಲಿ ಜರುಗಿದ ಅಂತಾರಾಷ್ಟ್ರೀಯ ಡಬ್ಲ್ಯುಟಿಟಿ ಯೂಥ್ ಕಂಟೆಂಡರ್ ಟೇಬಲ್ ಟೆನಿಸ್ ಪಂದ್ಯಾವಳಿಯ 11 ವರ್ಷ ವಯೋಮಿತಿಯ ಬಾಲಕರ ವಿಭಾಗದಲ್ಲಿ ಹುಬ್ಬಳ್ಳಿ ಅದರಗುಂಚಿ ಗ್ರಾಮದ ಸಿಐಸಿ ಆಂಗ್ಲ ಮಾಧ್ಯಮ ಶಾಲೆಯ ಸುಚಿತ ಧರೆಣ್ಣವರ ಕಂಚಿನ ಪದಕ ಜಯಿಸಿದ್ದಾರೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ